ಕರ್ನಾಟಕ ಸರ್ಕಾರ
**GOVERNMENT OF KARNATAKA**
ಅಡ್ವೊಕೇಟ್ ಜನರಲ್‌ರವರ ಕಛೇರಿ, ಉಚ್ಛ ನ್ಯಾಯಾಲಯ ಕಟ್ಟಡ, ಬೆಂಗಳೂರು – 560 001.
ದೂರವಾಣಿ ಸಂಖ್ಯೆ: 080 22862583, E-mail ID: advgen2009@gmail.com

ಎಫ್.ಎನ್.107/ಎಜಿ/ಸಿಬ್ಬಂದಿ/2022-23/೨೧ ದಿನಾಂಕ:01.12.2023

## "ಸುತ್ತೋಲೆ"

ವಿಷಯ: ಈ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹಾಗೂ ವಾಹನ ಚಾಲಕ ವೃಂದ ಗಳಿಂದ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ಪದೋನ್ನತಿ ನೀಡುವ ಬಗ್ಗೆ ಆಕ್ಷೇಪಣೆ ಸಲ್ಲಿಸುವ ಕುರಿತು.

* * * * *

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಡ್ವೊಕೇಟ್ ಜನರಲ್‌ರವರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹಾಗೂ ವಾಹನ ಚಾಲಕ ವೃಂದಗಳಿಂದ ಪ್ರಥಮ ದರ್ಜೆ ಸಹಾಯಕ ವೃಂದಕ್ಕೆ ಪದೋನ್ನತಿ ನೀಡಲು ಅವಕಾಶ ನೀಡುವಂತೆ ಕೋರಿಕೆ ಸಲ್ಲಿಸಿದ್ದು, ಅದರಂತೆ ಇಲಾಖೆ/ಕಚೇರಿಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸುವ ಬಗ್ಗೆ ಈ ಕೆಳಗಿನಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಪ್ರಸ್ತುತ ಈ ಕಚೇರಿಯಲ್ಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ದ್ವಿ.ದ..ಸ ಹುದ್ದೆಯಿಂದ ಪ್ರ.ದ.ಸ. ಹುದ್ದೆಯ ಪದೋನ್ನತಿಗೆ 50% ನೇರ ನೇಮಕಾತಿ ಹಾಗು 50% ಮುಂಬಡ್ತಿ ಎಂದು ನಿಗದಿಪಡಿಸಲಾಗಿರುತ್ತದೆ. ಇದರಿಂದ ದ್ವಿ.ದ.ಸ. ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮುಂಬಡ್ತಿಯಿಂದ ವಂಚಿತರಾಗುತ್ತಿದ್ದು, ಮುಂಬಡ್ತಿ ಹೊಂದಲು ದೀರ್ಘ ಕಾಲದವರೆಗೆ ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವ ಅನಿವಾರ್ಯತೆ ಉಂಟಾಗಿರುತ್ತದೆ ಮುಂದುವರೆದಂತೆ ಮುಂಬಡ್ತಿಯಿಂದ ವಂಚಿತರಾಗುತ್ತಿರುವ ನೌಕರರಿಗೆ ಕಾಲ ಕಾಲಕ್ಕೆ ಮುಂಬಡ್ತಿ ಹೊಂದಲು ಅನುಕೂಲವಾಗುವಂತೆ ಈ ಕಚೇರಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆಯಿದ್ದು 50% ನೇರ ನೇಮಕಾತಿ ಹಾಗು 50% ರಷ್ಟು ಮುಂಬಡ್ತಿ ಹುದ್ದೆಗಳ ಬದಲಾಗಿ 25% ನೇರ ನೇಮಕಾತಿ ಮತ್ತು 75% ಮುಂಬಡ್ತಿಗೆ ಎಂದು ಪರಿಗಣಿಸಿದ್ದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರು ನೌಕರರಿಗೆ ಕಾಲ-ಕಾಲಕ್ಕೆ ಮುಂಬಡ್ತಿಗಳನ್ನು ಹೊಂದಲು ಸದಾವಕಾಶವನ್ನು ಮಾಡಿಕೊಟ್ಟಂತಾಗುತ್ತದೆ.

ಪ್ರಸ್ತುತ ಈ ಕಚೇರಿಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ದ್ವಿತೀಯ ದರ್ಜೆ ಸಹಾಯಕರು ಹಾಗೂ ಲೈಬ್ರರಿ ಅಸಿಸ್ಟೆಂಟ್ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮುಂಬಡ್ತಿಯನ್ನು ಪರಿಗಣಿಸಲಾಗುತ್ತಿದ್ದು, ಪ್ರಸ್ತುತ ಸದರಿ ಲೈಬ್ರರಿ ಅಸಿಸ್ಟೆಂಟ್ ಹುದ್ದೆಯಿಂದ ಪ್ರ.ದ.ಸ. ಹುದ್ದೆಗೆ ಮುಂಬಡ್ತಿ ನೀಡುತ್ತಿರುವುದನ್ನು ಕೈಬಿಟ್ಟು ಪ್ರಸ್ತುತ ಚಾಲ್ತಿಯಲ್ಲಿರುವ ಸೀನಿಯರ್ ಲೈಬ್ರರಿಯನ್ ಹುದ್ದೆಯನ್ನು ಕೈಬಿಟ್ಟು ಅದರ ಬದಲಾಗಿ ಹೊಸದಾಗಿ ಸೃಜನೆಯಾಗುವ ಅಸಿಸ್ಟೆಂಟ್ ಲೈಬ್ರರಿಯನ್ (ಪ್ರ.ದ.ಸ. ಹುದ್ದೆಗೆ ಸಮಾನಾಂತರ ಹುದ್ದೆ) ಹುದ್ದೆಗೆ ಪದೋನ್ನತಿ ನೀಡಲು ಪರಿಗಣಿಸಬಹುದಾಗಿರುತ್ತದೆ.

ಮುಂದುವರೆದು, ಮೇಲೆ ತಿಳಿಸಿರುವಂತೆ ಪ್ರ.ದ.ಸ. ಹುದ್ದೆಯ ಮುಂಬಡ್ತಿಗೆ ಶೇ 75% ಹುದ್ದೆಗಳನ್ನು ಮುಂಬಡ್ತಿಗೆ ಪರಿಗಣಿಸುವ ನಿಟ್ಟಿನಲ್ಲಿ ಈ ಕಚೇರಿಯಲ್ಲಿ ಮಂಜೂರಾದ ಒಟ್ಟು 30 ಪ್ರ.ದ.ಸ. ಹುದ್ದೆಗಳ ಪೈಕಿ 75% ರಷ್ಟು ಮುಂಬಡ್ತಿಗೆ (23 ಹುದ್ದೆಗಳು) ಪರಿಗಣಿಸಿದ್ದಲ್ಲಿ ಈ ಕೆಳಕಂಡಂತೆ ಶೇಕಡಾವಾರು ಹುದ್ದೆಗಳನ್ನು ಮುಂಬಡ್ತಿಗೆ ಪರಿಗಣಿಸಲು ಪ್ರಸ್ತಾಪಿಸಲಾಗಿದೆ.

---೨/-

| Category of Post & the Scale of Pay | Number of the Posts | | Method of Recruitment | Minimum Qualification |
|---|---|---|---|---|
| | Perma Nent | Temp orary | | |
| (2) | (3) | (4) | (5) | (6) |
| First Division Assistants<br><br>(Rs.30350-58250) | 36 | - | Twenty five percent (i.e. 07 post) by direct recruitment in accordance with the Karnataka Civil Services (Recruitment to the Ministerial Posts) Rules, 1978; and<br><br>Seventy Five percent by promotion (i.e. 23 post) from the cadre of:-<br><br>Second Division Assistants<br><br>60% (14 posts)<br><br>Data Entry Assistants<br><br>30% (08 post)<br><br>Drivers<br><br>10% (01 post) | **For Direct recruitment.**<br><br>Must be holder of a Bachelor's Degree of an University established by law.<br><br>**For Promotion:** Must have put in a service of not less than five years in the cadre of Second Division Assistant, Data Entry Assistant and Drivers.<br><br>Provided that if persons who have put in a service of not less than five years are not available, persons who have put in a service of not less than three years may be considered for promotion. |

ಈ ಮೇಲ್ಕಂಡ ತಿದ್ದುಪಡಿಗಳನ್ನು ಕಚೇರಿಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿದ್ದು, ಈ ಕುರಿತಂತೆ ಯಾವುದಾದರೂ ಆಕ್ಷೇಪಣೆ/ಅಭಿಪ್ರಾಯಗಳಿದ್ದಲ್ಲಿ **ದಿನಾಂಕ: 08.12.2023ರೊಳಗೆ** ಲಿಖಿತ ರೂಪದಲ್ಲಿ ಆಡಳಿತಾಧಿಕಾರಿಯವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಯಾವುದೇ ಆಕ್ಷೇಪಣೆ ಮತ್ತು ಅಭಿಪ್ರಾಯಗಳು ನಿಗಧಿತ ಸಮಯದೊಳಗೆ ಸ್ವೀಕೃತಗೊಳ್ಳದಿದ್ದಲ್ಲಿ ನಿಮ್ಮ ಆಕ್ಷೇಪಣೆ/ಅಭಿಪ್ರಾಯಗಳು ಏನು ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

01/12/23

(ಅಭಿಜಿನ್ ಬಿ. ಕೆ.ಎ.ಎಸ್.)
ಆಡಳಿತಾಧಿಕಾರಿಗಳು,

ಆಡಳಿತಾಧಿಕಾರಿಗಳು
ಅಡ್ವೋಕೇಟ್ ಜನರಲ್‌ರವರ ಕಛೇರಿ
ಬೆಂಗಳೂರು-01

ಪ್ರತಿ:

1. The Assistant Administrative Officers, Head Office Bengaluru, KSAT Bengaluru, Dharwad and Kalaburagi for circulation.
2. All the Section Officers for circulation
3. Website for notification 4. Notice Board.